ಕರ್ನಾಟಕ ಸರ್ಕಾರ

# ತಹಶೀಲ್ದಾರರ ನ್ಯಾಯಾಲಯ ಹೂವಿನಹಡಗಲಿ

ಸಂ.ಕಂ/ಪಹಣಿ/ವಿವಾದ/48/2014-15 ದಿನಾಂಕ: 26-05-2016

ಉಪಸ್ಥಿತರು : ಹೆಚ್.ವಿಶ್ವನಾಥ, ತಹಶೀಲ್ದಾರರು,

| ವಾದಿಗಳು | ಪ್ರತಿವಾದಿಗಳು / ಎದುರುದಾರರು |
|---|---|
| **ಶ್ರೀಮತಿ ರಚಿತಾ ಸೊಪ್ಪಿನ ತಂದೆ ಸೊಪ್ಪಿನ ಪಂಪಣ್ಣ**<br>**ವಕೀಲರು : ಎಸ್ ಎಮ್ ಎಸ್** | **ಗಂಟಿ ಮಾಬುಸಾಬ ತಂದೆ ಲೇಟ್ ಬುಡೇನ್ ಸಾಬ್**<br>**ಹಡಗಲಿ**<br>**ವಕೀಲರು:ಹೆಚ್ ನಾಗೇಶ** |

**ದಾವಾ ಜಮೀನಿನ ವಿವರ**

| ಗ್ರಾಮ | ಸರ್ವೇ ನಂಬರ್ | ವಿಸ್ತೀರ್ಣ (ಎಕರೆ.ಸೆಂಟ್ಸ್) |
|---|---|---|
| ಕೊಯ್ಲಾರಗಟ್ಟಿ | 107/C/2A | 20.23 |

**ಪ್ರಸ್ತಾವನೆ :**

ಮೇಲಿನ ದಾವಾ ಜಮೀನಿಗೆ ಸಂಬಂದಿಸಿದಂತೆ ಶ್ರೀಮತಿ ರಚಿತಾ ಸೊಪ್ಪಿನ ತಂದೆ ಸೊಪ್ಪಿನ ಪಂಪಣ್ಣ ಇವರು ದಿನಾಂಕ 15/10/2014 ರಂದು ಅರ್ಜಿ ಸಲ್ಲಿಸಿ ದಿನಾಂಕ 28/07/2010 ಪಾಲುವಿಭಾಗ ಪತ್ರದ ಪ್ರಕಾರ ತಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಲು ಕೋರಿರುತ್ತಾರೆ.ಈ ಮೇರೆಗೆ ಎಂ ಆರ್ ಸಂಖ್ಯೆ ಹೆಚ್14/2014-15 ರಲ್ಲಿ ಪ್ರಕರಣ ದಾಖಲಿಸಿಕೊಂಡು ನಮೂನೆ 21 ನೋಟೀಸನ್ನು ಜಾರಿ ಮಾಡಿ ಪ್ರಚುರಪಡಿಸಿರುತ್ತದೆ ನೋಟೀಸು ಜಾರಿ ಮಾಡಿದ ನಿಗದಿತ ಅವಧಿಯೊಳಗೆ ಶ್ರೀ ಗಂಟಿ ಮಾಬುಸಾಬ ತಂದೆ ಲೇಟ್ ಬುಡೇನ್ ಸಾಬ್ ಇವರು ದಿನಾಂಕ 11/11/2014 ರಂದು ತಕರಾರು ಸಲ್ಲಿಸಿದ ಕಾರಣ ಕಂದಾಯ ನೀರೀಕ್ಷಕರು ಹಡಗಲಿ ಇವರು ವಿವಾದಾಸ್ಪದ ಪ್ರಕರಣವೆಂದು ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ..

ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ, ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 129ರ ಅನ್ವಯ ನೈಸರ್ಗಿಕ ನ್ಯಾಯ ದೃಷ್ಟಿಯಿಂದ ವಾದಿ ಮತ್ತು ಪ್ರತಿವಾದಿಗಳಿಗೆ ಕೇಳಿಕೊಳ್ಳಲು ಅವಕಾಶ ನೀಡಿ ದಿನಾಂಕ 19/01/2015 ರಂದು ವಿಚಾರಣೆಗೆ ಹಾಜರಾಗಲು ನೋಟೀಸು ನೀಡಿ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಿ ದಿನಾಂಕ 23/07/2015 ಕ್ಕೆ ಅಂತಿಮಗೊಳಿಸಲಾಯಿತು.

ವಿಚಾರಣೆಗೆ ವಾದಿಯಾದ ಶ್ರೀಮತಿ ರಚಿತಾ ಸೊಪ್ಪಿನ ಇವರು ಹಾಜರಾಗಿರುವುದಿಲ್ಲ ಅವರ ಪರವಾಗಿ ಅವರ ವಕೀಲರು ಹಾಜರಾಗಿರುತ್ತಾರೆ. ಪ್ರತಿವಾದಿಗಳು ತಮ್ಮ ವಕೀಲರೊಂದಿಗೆ ಹಾಜರಾಗಿ ಸಹಿ ಇಲ್ಲದ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.ಸದರಿ ಹೇಳಿಕೆಯಲ್ಲಿ ದಾವಾ ಜಮೀನು ತಮ್ಮ ಪೂರ್ವಿಕರ ಹೆಸರಿನಲ್ಲಿದ್ದು ಸೊಪ್ಪಿನ ಮಲ್ಲಪ್ಪ ಇವರ ಹೆಸರು ಯಾವ ರೀತಿ ದಾಖಲಾಗಿದೆಯೆಂದು ತಿಳಿದಿರುವುದಿಲ್ಲವೆಂದು,ದಾವಾ ಜಮೀನು ತಮ್ಮ ಹಕ್ಕು ಸ್ವಾಧೀನಾನುಭವದಲ್ಲಿ ಇಂದಿಗೂ ಇರುವುದೆಂದು ತಿಳಿಸಿರಿರುತ್ತಾರೆ.

ವಾದಿ ಪರ ವಕೀರಲರು ಪ್ರತಿವಾದಿಗಳು ಮಾಡಿದ ತಕರಾರಿನಲ್ಲಿ ಯಾವುದೇ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳದೇ ವಾದಿಗಳ ಪರವಾಗಿ ಹಕ್ಕುಬದಲಾವಣೆ ಮಾಡಲು ಕೋರಿರುತ್ತಾರೆ.

ಈ ಪ್ರಕರಣಕ್ಕೆ ಸಂಬಂದಿಸಿದಂತೆ ವಾದಿ ಮತ್ತು ಪ್ರತಿವಾದಿ ವಕೀಲರು ಮಾಡಿದ ವಾದದ ಮೇರೆಗೆ ಕಂದಾಯ ನೀರೀಕ್ಷಕರು ಹಡಗಲಿ ಇವರನ್ನು ಸ್ಥಳತನಿಖೆ ಮಾಡಿ ವಿಚಾರಣಾ ವರದಿಯನ್ನು ಸಲ್ಲಿಸಲು ಕೋರಲಾಗಿತ್ತು ಕಂದಾಯ ನೀರೀಕ್ಷಕರು ಹಡಗಲಿ ಇವರು ತಮ್ಮ ಪತ್ರ ಸಂಖ್ಯೆ ಕಂ.ನಿ.ಆ 192/2016-17 ದಿನಾಂಕ 08/07/2016 ರಲ್ಲಿ ವರದಿ ಸಲ್ಲಿಸಿ ದಾವಾ ಜಮೀನು ಶ್ರೀ ಸೊಪ್ಪಿನ ಮಲ್ಲಪ್ಪ ತಂದೆ ಬಸವಲಿಂಗಪ್ಪ ಇವರ ಹೆಸರಿನಲ್ಲಿದ್ದು 1)ದೊಡ್ಡಷರೀಪಸಾಬ್ ತಂದೆ ಕಾಶಿಮಲಿಸಾಬ 2) ಸಣ್ಣ ಷರೀಪಸಾಬ್ ತಂದೆ ಕಾಶಿಮಲಿಸಾಬ 3)ರಾಜಾಸಾಬ್ ತಂದೆ ಕಾಶಿಮಲಿಸಾಬ 4)ಎಸ್ ಮಾಬುಸಾಬ ತಂದೆ ಕಾಶಿಮಲಿಸಾಬ 5)ಪೀರುಸಾಬ ತಂದೆ ದಾವಲಸಾಬ 6)ಇಸ್ಮಾಯಿಲ್ ಸಾಬ್ 7)ಗಂಟೆ ಮಾಬುಸಾಬ್ ತಂದೆ ಬುಡೇನಸಾಬ 8)ಗಂಟೆ ಹಶೀನಸಾಬ ತಂದೆ ಮುಕ್ತುಂಸಾಬ 9)ಗಂಟಿಬುಡೇನಸಾಬ ತಂದೆ ಮುಕ್ತುಂಸಾಬ 10) )ಗಂಟಿಸಣ್ಣಬುಡೇನಸಾಬ ತಂದೆ ಮುಕ್ತುಂಸಾಬ 11)ಗಂಟಿ ಇಮಾಮಸಾಬ ತಂದೆ ಮೋದಿನಸಾಬ ಇವರುಗಳು ಸದರಿ ಜಮೀನಿನಲ್ಲಿ ಸಾಗು ಇರುತ್ತಾರೆ ಎಂದು ವರದಿ ಸಲ್ಲಿಸಿರುತ್ತಾರೆ.ದಾಖಲೆಗಳನ್ನು ಪರಿಶೀಲಿಸಲಾಗಿ ಶ್ರೀ ಸೊಪ್ಪಿನ ಮಲ್ಲಪ್ಪ ತಂದೆ ಬಸವಲಿಂಗಪ್ಪ ಇವರ ಹೆಸರಿನಲ್ಲಿ

ನಮೂದುಗಳಿದ್ದು ,ದಾವಾ ಜಮೀನು ಇವರ ಸ್ವಾದೀನದಲ್ಲಿ ಇರುವುದಿಲ್ಲವೆಂಬ ಅಂಶವು ಮೇಲ್ನೋಟಕ್ಕೆ ಕಂಡು ಬಂದಿದ್ದು ಪ್ರಕರಣವು ಸಿವಿಲ್ ಸ್ವರೂಪದ್ದಾಗಿರುವುದರಿಂದ ಈ ಕೆಳಕಂಡ ಆದೇಶ

## ಆದೇಶ

ಪ್ರಕರಣದ ಹಿನ್ನೆಲೆ, ವಾಸ್ತವಾಂಶ ಹಾಗು ದಾಖಲೆಗಳನ್ವಯ ವಾದಿ ಮತ್ತು ಪ್ರತಿವಾದಿಗಳು ದಾವಾ ಜಮೀನಿನ ಬಗ್ಗೆ ಸಿವಿಲ್ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿ ಪರಿಹಾರ ಕಂಡುಕೊಳ್ಳಲು ಆದೇಶಿಸಿದೆ.

| ಗ್ರಾಮ | ಸರ್ವೇ ನಂಬರ್ | ವಿಸ್ತೀರ್ಣ (ಎಕರೆ.ಸೆಂಟ್ಸ್) |
|---|---|---|
| ಕೊಯ್ಲಾರಗಟ್ಟಿ | 107/C/2A | 20.23 |

ಈ ಆದೇಶವನ್ನು ಬೆರಳಚ್ಚುಮಾಡಿಸಿ, ದಿನಾಂಕ 26-05-2016ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

26/5/16

ತಹಶೀಲ್ದಾರರು,
ಹಡಗಲಿ.

ತಹಶೀಲ್ದಾರರು
ಹೂವಿನಹಡಗಲಿ

ಪ್ರತಿಗಳನ್ನು :

1) ವಾದಿ ಮತ್ತು ಪ್ರತಿವಾದಿಗಳಿಗೆ ಹಾಗೂ ಅವರ ಪರ ನ್ಯಾಯವಾದಿಗಳಿಗೆ.

2) ಭೂಮಿ ಕೇಂದ್ರಕ್ಕೆ ಸೂಕ್ತ ಕ್ರಮಕ್ಕಾಗಿ.